**ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ**

**ಸಿಸಿ ಸಂಖ್ಯೆ: 194/2021**

ಪಿರ್ಯಾದುದಾರರು : ರಾಜ್ಯದ ಪರವಾಗಿ ಹಲವಾಗಲು ಪೊಲೀಸ್ ಠಾಣೆ.

ವಿರುದ್ಧ

ಆರೋಪಿತರು

1. ಕರಿಗೌಡ ಜಿ. ತಂದೆ: ಹನುಮನ ಗೌಡ,
2. ನಾಗರಾಜ ಜಿ.ಬಿ ತಂದೆ: ಭೀಮನ ಗೌಡ
3. ರಾಮನ ಗೌಡ ಜಿ.ಬಿ. ತಂದೆ: ಭೀಮನ ಗೌಡ
4. ಪಂಚನಗೌಡ ತಂದೆ: ಹನುಮನ ಗೌಡ
5. ವರುಣ್ ಗೌಡ ತಂದೆ: ಪಂಚನ ಗೌಡ
6. ಕೀರಣ್ ಗೌಡ ತಂದೆ: ಪಂಚನ ಗೌಡ
7. ಪರಗಂಟಿ ಶಿವಕುಮಾರ್ ತಂದೆ: ನೀಲಕಂಟಪ್ಪ
8. ಮೃತಂಜಯ್ಯ ಬಿ ತಂದೆ: ನಿಂಗಪ್ಪ
9. ಚಿನ್ನಪ್ಪರ ಹನುಮಂತಪ್ಪ ತಂದೆ: ಚಿನ್ನಪ್ಪ
10. ಶಿವಮೂರ್ತಿ ಕೆ.ಆರ್. ತಂದೆ: ಆನಂದಪ್ಪ
11. ಕೊಟ್ರ ಗೌಡ ಜಿ ತಂದೆ: ಭೂತನ ಗೌಡ
12. ದೇವರಾಜ್ ಗೌಡ ತಂದೆ: ಶೇಖರ್ ಗೌಡ
13. ಶಶಿ ತಂದೆ: ಕಲ್ಲೇಹಲ್ಲರ ಮಂಜಪ್ಪ
14. ಹೂಣಿಸಿಹಳ್ಳಿ ಕೊಟ್ರೇಶ್ ತಂದೆ: ದ್ಯಾಮಪ್ಪ
15. ಹರೀಶ್ ಗೌಡ ತಂದೆ: ಕರಿ ಗೌಡ
16. ಆಕಾಶ ಗೌಡ ತಂದೆ: ಕರಿ ಗೌಡ
17. ನಾಗಭೂಷಣ ತಂದೆ: ಬಸವರಾಜಪ್ಪ
19. ಶೇಖರ್ ಗೌಡ ತಂದೆ: ಹನುಮನ ಗೌಡ

ಎಲ್ಲಾರ ವಾಸ: ರಾಗಿಮಸಲವಾಡ ಗ್ರಾಮ, ಹರಪನಹಳ್ಳಿ ತಾಲೂಕು.

<u>ದೋಷಾರೋಪಣೆ ಃ</u>

(ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ ಆದ ಶ್ರೀಮತಿ ಭಾರತಿ, ಎಂ. ಬಿಕಾಂ., ಎಲ್ ಎಲ್.ಬಿ, ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆಯ ಸಾರಾಂಶವೇನೆಂದರೆ)

ಚಾಸಾ 1, ಚಾಸಾ 4 ರವರಿಗೆ ದಿಃ 24.11.2020 ರಂದು ಮಧ್ಯಾಹ್ನ 1 ಗಂಟೆ ಸಮಯದಲ್ಲಿ ಮನೆಯಲ್ಲಿರುವಾಗ ಚಾಸಾ 7 ರವರು ಪೋನ್ ಮಾಡಿ ಶ್ರೀ ಆಂಜಿನೇಯ ದೇವಸ್ಥಾನದ ವಿಚಾರವಾಗಿ ಚಾಸಾ 12 ರವರು, ಚಾಸಾ 13 ರಿಂದ ಚಾಸಾ 16 ರವರೊಂದಿಗೆ ರಾಗಿಮಸಲವಾಡ ಗ್ರಾಮದಲ್ಲಿರುವ ಗ್ರಾಮಲೆಕ್ಕಧಿಕಾರಿಗಳ ಕಚೇರಿಗೆ ವಿಚಾರಣೆಗಾಗಿ ಬರುತ್ತಿದ್ದಾರೆ ನೀವು ಬನ್ನಿ ಅಂತಾ ತಿಳಿಸಿದಾಗ ಚಾಸಾ 1 ಮತ್ತು ಚಾಸಾ 4 ರವರು ಮಧ್ಯಾಹ್ನ 1.10 ಗಂಟೆ ಸಮಯಕ್ಕೆ ಗ್ರಾಮಲೆಕ್ಕಾಧಿಕಾರಿಗಳು ಕಚೇರಿಗೆ ಹೋದಾಗ ಸದರಿ ಗ್ರಾಮಲೆಕ್ಕಧಿಕಾರಿಗಳು ಕಚೇರಿಯಲ್ಲಿ ಚಾಸಾ 12 ರಿಂದ ಚಾಸಾ 16 ರವರು ಮತ್ತು ಆರೋಪಿತರಾದ ನೀವುಗಳು, ಹಾಗೂ ಗ್ರಾಮದ ಇತರರು ಕಚೇರಿಯ ಬಳಿ ಇದ್ದಾಗ ಚಾಸಾ 1, ಚಾಸಾ 4 ಹಾಗೂ ಚಾಸಾ 7 ರವರು ಕಚೇರಿಯ ಒಳಗೆ ಹೋದಾಗ ಚಾಸಾ 12 ರವರು ಚಾಸಾ 1 ಮತ್ತು ಚಾಸಾ 4 ರವರ ವಿರುದ್ದ 19 ಆರೋಪಿತರಾದ ನೀವು, ಚಾಸಾ 1 ಮತ್ತು ಚಾಸಾ 4 ರವರು ಶ್ರೀ ಆಂಜಿನೇಯ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಂದ ಬೋರ್ ಪಾಯಿಂಟೆ ತೋರಿಸಿ ನೀರು ಬೀಳುತ್ತದೆ ಅಂತಾ ಹೇಳಿ ಭಕ್ತಾಧಿಗಳಿಂದ ಹಣ ಪಡೆಯುತ್ತಿದ್ದಾರೆಂದು ದೂರು ಅರ್ಜಿ ಬಂದಿರುತ್ತದೆ ಅಂತಾ ತಿಳಿಸಿ ಚಾಸಾ 12 ರವರು ಅರ್ಜಿಯ ವಿಚಾರವಾಗಿ ಚಾಸಾ 4 ರವರಿಗೆ ನೀವು ದೇವಸ್ಥಾನವನ್ನು ಸರಿಯಾಗಿ ನಿರ್ವಹಿಸಿಕೊಂಡು ಹೋಗಬೇಕು ಹಾಗೂ ದೇವಸ್ಥಾನದ ಎಲ್ಲಾ ವಿಚಾರವನ್ನು ನಮ್ಮ ಗಮನಕ್ಕೆ ತರಬೇಕು ಅಂತಾ ತಿಳಿಸಿದಾಗ ಚಾಸಾ 4 ರವರು ಈ ಹಿಂದೆ 9 ಆರೋಪಿತರಾದ ಚೆನ್ನಪ್ಪರ ಹನುಮಂತಪ್ಪ ರವರು ದೇವಸ್ಥಾನದ ದ್ವಾರ ಬಾಗಿಲ ಹತ್ತಿರ ಶೇಂಗಾ ಒಣಗಿಸಲು ಹಾಕಿದಾಗ ಇಲ್ಲಿ ಶೇಂಗಾ ಹಾಕಬೇಡಿ ಅಂತಾ ಹೇಳಿದಕ್ಕೆ 9 ನೇ ಆರೋಪಿತರಾದ ನೀವು, ಅವಾಚ್ಯ ಶಬ್ದಗಳಿಂದ ಬೈದಾಡಿ ಜಗಳ ಮಾಡಿದರು ಅಂತಾ ಚಾಸಾ 12 ರವರಿಗೆ ಹೇಳುತ್ತಿದ್ದಂತೆ 9 ನೇ ಆರೋಪಿತರಿಗೆ ಯಾಕೆ ಬೈದಾಡುತ್ತೀರಿ ನಾನು ಸಹ ಈ ಹಿಂದೆ ದೇವಸ್ಥಾನದ ವಿಚಾರವಾಗಿ ಉಪ ತಹಶೀಲ್ದಾರವರಿಗೆ ಅರ್ಜಿ ನೀಡಿರುತ್ತೇನೆ ಅಂತಾ ಹೇಳಿತ್ತಿದ್ದಂತೆ ಅಲ್ಲೆ ಇದ್ದ 1 ನೇ ಆರೋಪಿತರಾದ ನೀವು ಲೇ ಸೂಳೇ ಮಗನೆ ನಿಮ್ಮ ತಾಯಿನಹಡ ನಮ್ಮ ವಿರುದ್ದ ಅರ್ಜಿ ಕೊಡುತ್ತೀಯ ನಾವು ಊರಿನ ಗೌಡರು ನಮಗೆ ಯಾರೂ ಏನು ಮಾಡಲು ಆಗಲ್ಲ ಅಂತಾ ಬೈದಾಡಿರುವುದರಿಂದ, ಈ ಮೂಲಕ ಆರೋಪಿಗಳಾದ ನೀವುಗಳ ಭಾರತೀಯ ದಂಡ ಸಂಹಿತೆ

ಕಲಂ.504 ಸಹವಾಚಕ ಕಲಂ.149ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಎರಡನೇಯದಾಗಿ ಮೇಲ್ಕಂಡ ದಿನಾಂಕ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವುಗಳು, 1 ನೇ ಆರೋಪಿ ಕೈಯಿಂದ ಚಾಸಾ 1 ರವರಿಗೆ ಗದ್ದ ಮತ್ತು ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ನಂತರ ಆರೋಪಿಗಳಾದ ನೀವೆಲ್ಲರೂ ಸೇರಿ ಜಗಳ ಮಾಡುವ ಉದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಈ ಮೂಲಕ ಆರೋಪಿಗಳಾದ ನೀವುಗಳ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ ಕಾಲಂ 149 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಮೂರನೇಯದಾಗಿ ಮೇಲ್ಕಡ ದಿನಾಂಕ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವುಗಳು, ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ದೊಂಬಿ ಮಾಡಿ ಮೂಲಕ ಆರೋಪಿಗಳಾದ ನೀವುಗಳ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ ಕಾಲಂ 149 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ನಾಲ್ಕನೇಯದಾಗಿ ಮೇಲ್ಕಡ ದಿನಾಂಕ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವುಗಳು, ಚಾಸಾ 1 ಮತ್ತು ಚಾಸಾ 4 ರವರಿಗೆ ಕೈಗಳಿಂದ ಮೈಕೈ ಹೊಡೆದು ಸಾಮನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ ನಂತರ ಚಾಸಾ 1 ಮತ್ತು ಚಾಸಾ 4 ರವರಿಗೆ ಆರೋಪಿತರಾದ ನೀವುಗಳು ಎಲ್ಲಾರು ಸೇರಿ ಕೈಕಾಲುಗಳಿಂದ ಚಾಸಾ 1 ಮತ್ತು ಚಾಸಾ 4 ರವರ ಮೈಕೈಗೆ ಹಾಗೂ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ನಂತರ ಅಲ್ಲೆ ಇದ್ದ ಚಾಸಾ 7 ರವರು ಜಗಳ ಬಿಡಿಸಿ ಚಾಸಾ 4 ರವರನ್ನು ಮನೆಗೆ ಕಳಿಸಿರುತ್ತಾರೆ ನಂತರ 1 ನೇ ಆರೋಪಿತರಾದ ನೀವು, ಕೊರಳಪಟ್ಟಿ ಹಿಡಿದುಕೊಂಡು ಕಾರ್ಯಲಾಯದಿಂದ ಹೊರಗೆ ಎಳೆದುಕೊಂಡು ಬಂದು ಮೇಲ್ಕಂಡ ಎಲ್ಲಾ ಆರೋಪಿತರು ಚಾಸಾ 1 ರವರಿಗೆ ಹೊಟ್ಟೆಗೆ, ಮುಖಕ್ಕೆ ಹಾಗೂ ಎರಡು ಕಿವಿಗಳ ಹತ್ತಿರ ಹೊಡೆದು ಹಲ್ಲೆ ಮಾಡಿರುತ್ತಾರೆ. ನಂತರ ಗಲಾಟೆ ಸಮಯದಲ್ಲಿ ವಿಡಿಯೋ ಮಾಡುತ್ತಿದ್ದ ಚಾಸಾ 5 ರವರಿಗೆ 3 ಮತ್ತು 5 ನೇ ಆರೋಪಿತರು ಕೈಕಾಲುಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ, ನಂತರ ಗಲಾಟೆ ಬಿಡಿಸುತ್ತಿದ್ದ ಚಾಸಾ 6 ರವರಿಗೆ 1 , 8 ಮತ್ತು 9 ನೇ ಆರೋಪಿತರಾದ ನೀವು, ಕೈಕಾಲುಗಳಿಂದ ಚಾಸಾ 6 ರವರಿಗೆ ಮೈ ಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುವುದರಿಂದ, ಈ ಮೂಲಕ ಆರೋಪಿಗಳಾದ ನೀವುಗಳ ಭಾರತೀಯ ದಂಡ ಸಂಹಿತೆ

ಕಲಂ.323 ಸಹವಾಚಕ ಕಲಂ.149ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ಆಪಾದಿಸಲಾಗಿದೆ?

,ಐದನೇಯದಾಗಿ ಮೇಲ್ಕಡ ದಿನಾಂಕ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವುಗಳು, ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಕೊಲೆ ಮಾಡುತ್ತೆವೆಂದು ಜೀವ ಬೆದರಿಕೆ ಹಾಕಿರುತ್ತೀರಿ, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 149 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ ಎಂದು ಆಪಾದಿಸಲಾಗಿದೆ?

(ದಿನಾಂಕ 23.03.2023. ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ, ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

ಪ್ರಶ್ನೆಃ 1 ಈಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2 ನೀವು ಈ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ಪ್ರತಿರಕ್ಷೆ ಇದೆಯೇ?

ಉತ್ತರಃ

(ಆಪಾದಿತರ ಹೇಳಿಕೆಯನ್ನು ನನ್ನ ಸಮ್ಮುಖದಲ್ಲಿ ಪಡೆದುಕೊಂಡಿದ್ದು ಸದರಿ ಹೇಳಿಕೆಯು ಆಪಾದಿತರ ಸಂಪೂರ್ಣ ಮತ್ತು ಸರಿಯಾದ ಹೇಳಿಕೆಯನ್ನು ಒಳಗೊಂಡಿರುತ್ತದೆ.)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹರಪನಹಳ್ಳಿ